
# ಬೆಳಕಿನ ಸಂಚಲನ

ಸಂಪುಟ 13, ಸಂಚಿಕೆ 6 ದ್ವೈಮಾಸಿಕ ವಾರ್ತಾಪತ್ರ ನವೆಂಬರ್–ಡಿಸೆಂಬರ್ 2025



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಆಗಸ್ಟ್ 14, 2011)

ಅನು: ಶ್ರೀದೇವಿ

ಮುಕ್ತಿ ಎಂದರೇನು?

ನಾವು ಆತ್ಮಗಳು, ನಾವು ಸ್ವತಃ ದೇವರೇ ಆಗಿರುವ ಮಹಾನ್ ಬೆಳಕಿನ ಕಣಗಳು ಎನ್ನುವ ಅರಿವಿನೊಂದಿಗೆ ಮುಕ್ತಿ ಪ್ರಾರಂಭವಾಗುತ್ತದೆ. ನಾವು ಯಾವಾಗಲೂ ಸ್ವತಂತ್ರರು ಎನ್ನುವುದನ್ನು ಮನಗಾಣುವುದೇ ಮುಕ್ತಿ.

ವಿವಿಧ ಕಾರಣಗಳಿಂದ ನಾವು ಇಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಎಲ್ಲಾ ರೀತಿಯ ಬಂಧನಗಳಿಂದ ಸ್ವಾತಂತ್ರ್ಯ ಪಡೆಯುವುದು ಮುಕ್ತಿ.

ಮುಕ್ತಿ ಎಂದರೆ ಅಜ್ಞಾನದಿಂದ ಬಿಡುಗಡೆ, ಎಲ್ಲಾ ಪ್ರಶ್ನೆಗಳು ಮತ್ತು ಅನುಮಾನಗಳಿಂದ ಬಿಡುಗಡೆ, ಭಾವನೆಗಳು ಮತ್ತು ಆಲೋಚನೆಗಳಿಂದ ಬಿಡುಗಡೆ. ನಾವು ನಮ್ಮ ಮೂಲಕ್ಕೆ ಹಿಂತಿರುಗದೆ ಮುಕ್ತಿಯನ್ನು ಪಡೆಯಬಹುದು. ನಾವು ನಮ್ಮ ಸ್ವಂತ ನಕಾರಾತ್ಮಕತೆಗಳಿಂದ ಬಿಡುಗಡೆ ಹೊಂದಿದಾಗ, ನಾವು ಒಂದು ನಿರ್ದಿಷ್ಟ ಮಟ್ಟಕ್ಕೆ ಮುಕ್ತಿಯನ್ನು ಸಾಧಿಸಿದ್ದೇವೆ ಎಂದು ಹೇಳಬಹುದು.

ಮುಕ್ತಿಯ ಅಂತಿಮ ಹಂತವು ನಮ್ಮ ಮೂಲಕ್ಕೆ ಹಿಂತಿರುಗುವುದಾಗಿದೆ. ಅನೇಕ ಮಾಸ್ಟರ್‌ಗಳು ಮುಕ್ತಿಯನ್ನು ಸಾಧಿಸಿದ್ದಾರೆ ಆದರೆ ಸೃಷ್ಟಿಗಾಗಿ ಕೆಲಸ ಮಾಡಲು ಇಲ್ಲಿಯೇ ಉಳಿದಿದ್ದಾರೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಮ್ಮ ಜೀವನದಲ್ಲಿ ಬೆಳಕನ್ನು ಪ್ರಕಟಿಸುವುದಕ್ಕೆ ಪಡುವ ಪ್ರಯಾಸವು ಶಾಂತಿ ಮತ್ತು ಪರಿಪೂರ್ಣತೆಯತ್ತ ಸಾಗುವ ನಮ್ಮ ಪ್ರಯಾಣದ ಭಾಗವಾಗಿದೆ. ನಮ್ಮ ಹಾಗೂ ನಮ್ಮ ಸುತ್ತಮುತ್ತಲೂ ಇರುವ ಬೆಳಕಿನ ಬಗ್ಗೆ ಅರಿತುಕೊಳ್ಳುವುದು ಮತ್ತು ನಮ್ಮ ಬದುಕಿನಲ್ಲಿ ಅದನ್ನು ಪ್ರಕಟಿಸುವಲ್ಲಿ ನಮಗಿರುವ ಸಾಮರ್ಥ್ಯವನ್ನು ಅರಿತುಕೊಳ್ಳುವುದು ಈ ಪ್ರಯಾಣದ ಪ್ರಮುಖ ಭಾಗವಾಗಿದೆ. ಈ ಅರಿವನ್ನು ಹರಡುವುದು ನಮ್ಮ ಕೆಲಸದ ಪ್ರಮುಖ ಭಾಗವಾಗಿದೆ. ಬಲವಂತವಾಗಿ ಹೇರುವ ಯಾವುದೇ ಉದ್ದೇಶವಿಲ್ಲದೆ ಇದನ್ನು ಸದ್ದಿಲ್ಲದೆ ಮಾಡಲಾಗುತ್ತದೆ.

ಈ ಸಂಚಲನಕ್ಕಾಗಿ ಮಾಡುವ ಕೆಲಸವು ಬೆಳಕಿನ ಮಾರ್ಗಗಳನ್ನು ಅನುಸರಿಸಬೇಕು, ಆಗ ಮಾತ್ರ ಅದು ಮನುಕುಲವನ್ನು ಬೆಳಕಿನ ಯುಗದತ್ತ ಮುನ್ನಡೆಸಬಲ್ಲದು. ಇದು ಸಮಯ ತೆಗೆದುಕೊಳ್ಳುವುದಾದರೆ, ತೆಗೆದುಕೊಳ್ಳಲಿ. ಒಳ್ಳೆಯದು ಎಂದು ಏನನ್ನಾದರೂ ಹೇರುವುದು ಬೆಳಕಿನ ಮಾರ್ಗವಲ್ಲ. ಎಲ್ಲಾ ಮಟ್ಟಗಳಲ್ಲೂ ಸ್ವಾತಂತ್ರ್ಯವಿರಬೇಕು ಎನ್ನುವುದು ಬೆಳಕಿನ ಮಾರ್ಗವಾಗಿದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಪ್ರತಿ ವರ್ಷ, ಹತ್ತಿರದ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಹೊಸ ತಂಡವು ತಪೋನಗರಕ್ಕೆ ಭೇಟಿ ನೀಡುತ್ತದೆ. ಉದ್ದೇಶಪೂರ್ವಕ ಮತ್ತು ಸಮತೋಲನದ ಜೀವನವನ್ನು ನಡೆಸಲು ಧ್ಯಾನವು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಅರಿತುಕೊಳ್ಳುವುದು ಅವರ ಉದ್ದೇಶವಾಗಿದೆ. ಯುವ ಮನಸ್ಸುಗಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಕಾರ್ಯಕರ್ತರು ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುತ್ತಾರೆ ಹಾಗೂ ಈ ಸರಳ ತಂತ್ರವು ಒತ್ತಡವನ್ನು ಹೇಗೆ ಕಡಿಮೆ ಮಾಡುತ್ತದೆ, ಪರಸ್ಪರ ಸಂಬಂಧಗಳನ್ನು ಹೇಗೆ ವರ್ಧಿಸುತ್ತದೆ ಮತ್ತು ಜೀವನದ ಸವಾಲುಗಳನ್ನು ಸ್ಪಷ್ಟತೆ ಮತ್ತು ಆತ್ಮವಿಶ್ವಾಸದಿಂದ ಎದುರಿಸಲು ಅವರನ್ನು ಹೇಗೆ ಸಜ್ಜುಗೊಳಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಮಾರ್ಗದರ್ಶನ ನೀಡುತ್ತಾರೆ.

ಉತ್ಸಾಹಭರಿತ ಯುವ ಮನಸ್ಸುಗಳೊಂದಿಗೆ ಸಂವಹನ ನಡೆಸುವುದು ಮತ್ತು ಅವರ ಸವಾಲುಗಳು ಮತ್ತು ಆಕಾಂಕ್ಷೆಗಳ ಬಗ್ಗೆ ಒಳನೋಟವನ್ನು ಪಡೆಯುವುದು ಯಾವಾಗಲೂ ಸಂತೋಷದಾಯಕವಾಗಿರುತ್ತದೆ. ಕಾಲೇಜು ಅಧಿಕಾರಿಗಳು ಧ್ಯಾನದ ಮಹತ್ವವನ್ನು ಗುರುತಿಸಲು ಪ್ರಾರಂಭಿಸಿರುವುದನ್ನು ನೋಡುವುದು ಹೃದಯಸ್ಪರ್ಶಿಯಾಗಿದೆ. ನಿಯತವಾದ ಅಭ್ಯಾಸವು ವಿದ್ಯಾರ್ಥಿಗಳ ಜೀವನದಲ್ಲಿ ಮಾತ್ರವಲ್ಲದೆ ಅವರ ಸುತ್ತಮುತ್ತಲಿನ ಪರಿಸರದಲ್ಲೂ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತದೆ ಎಂಬ ವಿಶ್ವಾಸ ನನಗಿದೆ.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು–560077, ಭಾರತ.

ಫೋನ್: 99000 75280 (10am to 5pm), ಇ–ಮೇಲ್: info@lightagemasters.com

website: www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

ಅನು: ಶ್ರೀದೇವಿ

- ಕರ್ಮಗಳು ನಮ್ಮ ಸ್ವಂತ ಕ್ರಿಯೆಗಳ ಪರಿಣಾಮವಾಗಿ ನಮಗೆ ಅನುಭವಗಳನ್ನು ನೀಡಲು ಬರುತ್ತವೆ. ಅವು ನಮಗೆ ಪಾಠ ಕಲಿಸಲು ಬರುವುದಿಲ್ಲ, ಆದರೆ ನಾವು ಅವುಗಳಿಂದ ಬಹಳಷ್ಟು ಕಲಿಯಬಹುದು. ನಾವು ಅವುಗಳಿಂದ ಕಲಿಯುತ್ತೇವೆಯೋ ಇಲ್ಲವೋ ಎಂಬುದು ನಮಗೆ ಬಿಟ್ಟದ್ದು.
- ತನ್ನ ಬುದ್ಧಿಶಕ್ತಿಗೆ ಸೀಮಿತವಾಗಿರದ, ತರ್ಕಕ್ಕೆ ಮೀರಿದ ಸತ್ಯಗಳಿವೆ ಎಂದು ನಂಬುವ ವ್ಯಕ್ತಿಯನ್ನು ಅನುಭಾವಿ (mystic) ಎನ್ನುತ್ತೇವೆ. ಅನುಭಾವಿಯು ಉನ್ನತ, ಅಜ್ಞಾತ ಕ್ಷೇತ್ರಗಳಲ್ಲಿ ಸತ್ಯಶೋಧನೆಯಲ್ಲಿ ತೊಡಗಿ ರುತ್ತಾನೆ. ಅಲ್ಲಿ ಅವನು ಏನನ್ನು ಅನುಭವಿಸುತ್ತಾನೆಯೋ ಅದನ್ನು ಈ ಜಗತ್ತಿನಲ್ಲಿ ಅಭಿವ್ಯಕ್ತಿಗೊಳಿಸುತ್ತಾನೆ.
- ಬೆಳಕು ತನ್ನನ್ನು ಪ್ರೀತಿ, ಶಾಂತಿ, ಸತ್ಯ, ಉನ್ನತ ಅರಿವು, ಸಂತೋಷ, ಕನಸುಗಳು, ಮಹತ್ವಾಕಾಂಕ್ಷೆಗಳು, ಸಾಹಸಮಾಡುವುದರಲ್ಲಿ ತೀವ್ರಾಸಕ್ತಿ, ಹಂಚಿಕೊಳ್ಳಲು ಸ್ಫೂರ್ತಿ, ಮತ್ತು ಸುಳ್ಳು, ಭ್ರಷ್ಟಾಚಾರ, ಹಿಂಸಾಚಾರ, ಆಕ್ರಮಣಶೀಲತೆಯಲ್ಲಿ ಅಸಹಿಷ್ಣುತೆ ಹಾಗೂ ಇತರ ಅನೇಕ ರೀತಿಯಲ್ಲಿ ವ್ಯಕ್ತಪಡಿಸುತ್ತದೆ.
- ನಾವು ಪರಿವರ್ತನೆಗೊಳ್ಳಲು ನಿರ್ಧರಿಸಿದರೆ, ಯಾವುದೂ ಅಡ್ಡಿಯಾಗುವುದಿಲ್ಲ. ಕೆಲವೊಮ್ಮೆ, ನಾವು ದುರ್ಬಲ ರಾಗಿದ್ದರೆ ಕರ್ಮಗಳು ನಮ್ಮ ಸಾಧನೆಗೆ ತೊಂದರೆ ನೀಡುತ್ತವೆ, ಅಡ್ಡಿಪಡಿಸುತ್ತವೆ ಅಥವಾ ನಿರುತ್ಸಾಹ ಗೊಳಿಸುತ್ತವೆ. ಕರ್ಮಗಳು ನಮ್ಮನ್ನು ಧ್ಯಾನದಿಂದ ತಡೆಯುತ್ತಿವೆ ಎಂದು ನಾವು ಅರಿತುಕೊಂಡರೆ, ಅವುಗಳನ್ನು ಬದಿಗಿಡಬಹುದು. ನಾವು ನಿಜವಾಗಿಯೂ ಪರಿವರ್ತನೆ ಗೊಳ್ಳಲು ಬಯಸಿದರೆ, ಈ ಸೃಷ್ಟಿಯಲ್ಲಿ ಯಾವುದೇ ಶಕ್ತಿಯು ಅಡ್ಡಿಯಾಗುವುದಿಲ್ಲ. ಕರ್ಮಗಳೂ ಸಹ ಸಹಾಯ ಮಾಡುತ್ತವೆ.
- ನಾವೆಲ್ಲರೂ ನಿರುತ್ಸಾಹ, ಖಿನ್ನತೆ, ಉದ್ವಿಗ್ನತೆ ಮುಂತಾದ ಹಂತಗಳನ್ನು ಎದುರಿಸುತ್ತೇವೆ. ಅತ್ಯಂತ ಸರಳವಾದ, ಪರಿಣಾಮಕಾರಿಯಾದ ಮತ್ತು ಸಹಜವಾಗಿ ಮಾಡ ಬೇಕಾದ ಕೆಲಸವೆಂದರೆ ಬೆಳಕನ್ನು ಅನುಭವಿಸುವುದು. ನಿಮಗೆ ಬೆಳಕನ್ನು ಅನುಭವಿಸಲು ಸಾಧ್ಯವಾಗದಿದ್ದರೆ, ಬೆಳಕಿನ ಬಗ್ಗೆ ಯೋಚಿಸಿ. ನೀವು ಯಾವುದೇ ಖಿನ್ನತೆ ಅಥವಾ ನಿರುತ್ಸಾಹಗಳಿಂದ ಹೊರಬರುವಿರಿ.
- ನಿಮ್ಮನ್ನು ನೀವು ವಿಮರ್ಶೆ ಮಾಡುವಾಗ, ನಿಮ್ಮನ್ನು ಖಂಡಿಸಿಕೊಳ್ಳಬೇಡಿ. ನಾವು ಈಗಿರುವ ಹಂತವನ್ನು ಒಪ್ಪಿಕೊಳ್ಳೋಣ ಮತ್ತು ಅದನ್ನು ಮೀರಿ ಹೋಗಲು ಪ್ರಯತ್ನಿಸೋಣ. ನಾವು ಆತ್ಮಗಳು, ಮತ್ತು ನಾವೆಲ್ಲರೂ ಒಂದೇ ರೀತಿಯ ಸಾಮರ್ಥ್ಯವನ್ನು ಹೊಂದಿದ್ದೇವೆ. ಯಾರೂ ಮೇಲೂ ಅಲ್ಲ ಅಥವ ಕೀಳೂ ಅಲ್ಲ.
- ಆಧ್ಯಾತ್ಮಿಕ ಚೈತನ್ಯಗಳು ಎಂದಿಗೂ ನಮಗೆ ತೊಂದರೆ ನೀಡುವುದಿಲ್ಲ ಅಥವಾ ಅಪಘಾತಗಳನ್ನು ಉಂಟು ಮಾಡುವುದಿಲ್ಲ. ಗ್ರಹಣದ ಸಮಯದಲ್ಲಿ ಬಿಡುಗಡೆ ಯಾಗುವ ಚೈತನ್ಯಗಳು ಶುದ್ಧವಾಗಿರುತ್ತವೆ, ವಿಶೇಷ ವಾಗಿರುತ್ತವೆ ಮತ್ತು ಆಧ್ಯಾತ್ಮಿಕವಾಗಿರುತ್ತವೆ.
- ಅಮಾವಾಸ್ಯೆ ಅಥವಾ ಹುಣ್ಣಿಮೆಯ ಸಮಯದಲ್ಲಿ, ಚಂದ್ರನಿಂದ ನಾವು ಸಾಕಷ್ಟು ವಿಶೇಷ ಚೈತನ್ಯಗಳನ್ನು ಪಡೆಯುತ್ತೇವೆ. ಅದು ನಮ್ಮ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಭಾವನಾತ್ಮಕವಾಗಿ ನಾವು ಉನ್ನತ ಮಟ್ಟದಲ್ಲಿ ರುತ್ತೇವೆ, ದುಗುಡವಿರುವುದಿಲ್ಲ.
- ನಾವು ಅಸಾಧಾರಣವಾದ ಪ್ರೀತಿಯನ್ನು ಹೊಂದಿರುವಾಗ, ದೇವರೊಂದಿಗೆ ಇರುತ್ತೇವೆ ಮತ್ತು ನಮ್ಮ ಆಧ್ಯಾತ್ಮಿಕ ಗುರಿಯನ್ನು ಸಾಧಿಸಿರುತ್ತೇವೆ, ಅದು ಯಾವಾಗಲೂ ದೇವರೇ ಆಗಿರುತ್ತದೆ. ಬೆಳಕನ್ನು ಅನುಭವಿಸುವುದು ನಮ್ಮ ಆಧ್ಯಾತ್ಮಿಕ ಗುರಿಯನ್ನು ಸಾಧ್ಯವಾದಷ್ಟು ಬೇಗ ತಲುಪಲು ಸಹಾಯ ಮಾಡುತ್ತದೆ.

–ಗುರೂಜಿ ಕೃಷ್ಣಾನಂದ




ಬೆಂಗಳೂರಿನ ಉನ್ನತಿ, NSDC ಕೇಂದ್ರದ ಸದಸ್ಯರು ಸೆಪ್ಟೆಂಬರ್ 20, 2025ರಂದು ನಡೆದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.



ಬೆಂಗಳೂರಿನ ವಿಜಯ ವಿಠ್ಠಲ ಇಂಜಿನಿಯರಿಂಗ್ ಕಾಲೇಜಿನ ಹೊಸ ವಿದ್ಯಾರ್ಥಿಗಳು ಸೆಪ್ಟೆಂಬರ್ 24, 2025ರಂದು ನಡೆಸಿದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.



ಮಹಾರಾಷ್ಟ್ರದ ಸಂಗಮ್‌ನೇರ್‌ನಲ್ಲಿರುವ ಸಹಕಾರಿ ಸಾಲ ಸಂಘಗಳ ಮ್ಯಾನೇಜರ್‌ಗಳು ಅಕ್ಟೋಬರ್ 8, 2025ರಂದು ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.

## ಶ್ರೀ ಜಯಂತ್ ದೇಶಪಾಂಡೆಯವರ ಭಾಷಣದ ಆಯ್ದ ಭಾಗಗಳು
ಆಗಸ್ಟ್ 17, 2025

ಅನು: ಶ್ರೀದೇವಿ

ಲೈಟ್ ಚಾನೆಲಿಂಗ್ ಬಹಳ ಮುಖ್ಯವಾಗಿದೆ. ಈ ಅಭ್ಯಾಸದ ಮೂಲಕ, ನಾವು ಹೊಸ ಯುಗವನ್ನು ತರುವ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದೇವೆ, ಹೊಸ ಯುಗವನ್ನು ಪ್ರವೇಶಿಸಲು ಈ ಭೂಮಿಯನ್ನು ಸಿದ್ಧಪಡಿಸುತ್ತಿದ್ದೇವೆ. ನಾವು ಈ ಮಹಾನ್ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ ಎಂದು ತುಂಬಾ ಹೆಮ್ಮೆಪಡಬಹುದು. ನಮ್ಮ ಕೊಡುಗೆ ಹೆಚ್ಚು ಇಲ್ಲದಿರಬಹುದು, ಆದರೆ ಅದು ಬಹಳ ಮುಖ್ಯವಾದುದಾಗಿದೆ. ನಿಜವಾದ ಕೆಲಸವನ್ನು ಲೈಟ್ ಮಾಸ್ಟರ್‌ಗಳು ಮಾಡುತ್ತಾರೆ, ಆದರೆ ಅವರಿಗೆ ನಮ್ಮ ಭಾಗವಹಿಸುವಿಕೆಯ ಅಗತ್ಯವಿದೆ. ಅವರಿಗೆ ಮಾನವ ಮಟ್ಟದಲ್ಲಿ ಚಾನೆಲ್‌ಗಳ ಅಗತ್ಯವಿದೆ. ವಿಧಿ ಖಚಿತವಾದುದಲ್ಲ. ಅದನ್ನು ಸೃಷ್ಟಿಸಬೇಕು. ಅದನ್ನು ನಿರ್ಮಿಸಬೇಕು. ಈ ವಿಧಿಯನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ ನಾವು ತೊಡಗಿಸಿಕೊಂಡಿದ್ದೇವೆ. ಆದ್ದರಿಂದ ನಮ್ಮ ಭಾಗವಹಿಸುವಿಕೆ ಬಹಳ ಮುಖ್ಯವಾಗಿದೆ.

ಬೆಳಕನ್ನು ಚಾನೆಲ್ ಮಾಡುವ ಈ ಅಭ್ಯಾಸವು ನಿಜವಾಗಿಯೂ ಸಹಾಯ ಮಾಡುತ್ತಿದೆ ಎಂದು ನಮಗೆ ಹೇಗೆ ತಿಳಿಯುತ್ತದೆ? ಹೊಸ ಯುಗವನ್ನು ಪ್ರವೇಶಿಸಲು ನಾವು ಈ ಭೂಮಿಯನ್ನು ಸಿದ್ಧಪಡಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ನಾವು ಹೇಳಿದಾಗ, ಮುಖ್ಯವಾಗಿ ಮನುಷ್ಯರನ್ನು ಇದಕ್ಕಾಗಿ ಸಿದ್ಧಪಡಿಸುವುದು ಎಂದರ್ಥ. ಪ್ರಕೃತಿ ಈಗಾಗಲೇ ಹೊಸ ಯುಗವನ್ನು ಪ್ರವೇಶಿಸಲು ಸಿದ್ಧವಾಗಿದೆ. ಉಳಿದೆಲ್ಲವೂ ಸಿದ್ಧವಾಗಿವೆ. ಮನುಷ್ಯರು ಇನ್ನೂ ಸಿದ್ಧರಾಗಿಲ್ಲ. ಹಾಗಾದರೆ, ನಮ್ಮ ಪ್ರಯತ್ನಗಳು ಫಲಿತಾಂಶಗಳನ್ನು ತರುತ್ತಿವೆ ಎಂದು ನಮಗೆ ಹೇಗೆ ತಿಳಿಯುತ್ತದೆ? ವೈಯಕ್ತಿಕ ಮಟ್ಟದಲ್ಲಿ, ನಾವು ಅದನ್ನು ಅನುಭವಿಸಬಹುದು. ನಾವು ಬೆಳಕನ್ನು ಸ್ವೀಕರಿಸಿದಾಗ, ನೇರವಾಗಿ ಸಹಾಯ ಮತ್ತು ಪ್ರಯೋಜನಗಳನ್ನು ಪಡೆಯುತ್ತೇವೆ. "ನನಗೆ ನೋವು ಇದೆ, ಮತ್ತು ನಾನು ಈ ಬೆಳಕನ್ನು ನೋವಿರುವ ಭಾಗಕ್ಕೆ ನಿರ್ದೇಶಿಸುತ್ತೇನೆ, ಮತ್ತು ಬಹುತೇಕ ತಕ್ಷಣವೇ ನನಗೆ ಪರಿಹಾರ ಸಿಗುತ್ತದೆ," ಎಂದು ಜನರು ಹೇಳುತ್ತಾರೆ. ಒಬ್ಬ ಮಹಿಳೆ 12 ವರ್ಷದ ಬಾಲಕಿಗೆ ಬೆಳಕನ್ನು ಚಾನೆಲ್ ಮಾಡುವುದನ್ನು ಕಲಿಸಿದರು. ಆ ಹುಡುಗಿ ದಿನವಿಡೀ ತನ್ನ ಅಧ್ಯಯನದಲ್ಲಿ ನಿರತಳಾಗಿದ್ದಳು ಮತ್ತು ದಿನದ ಕೊನೆಗೆ ಅವಳಿಗೆ ಒಂದು ರೀತಿಯ ಭಾರವೆನಿಸಿತು. ನಂತರ ಅವಳು ಮೊದಲ ಬಾರಿಗೆ ಕೇವಲ 7 ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡಿದಳು. ಕೇವಲ 7 ನಿಮಿಷಗಳ ಅಭ್ಯಾಸದೊಂದಿಗೆ, ಆ ದಿನದ ತನ್ನ ಚಟುವಟಿಕೆಗಳನ್ನು ಆಗಷ್ಟೇ ಆರಂಭಿಸುತ್ತಿರುವಂತೆ ಅನ್ನಿಸುವಷ್ಟರ ಮಟ್ಟಿಗಿನ ಉಲ್ಲಾಸ ಅವಳಲ್ಲಿ ಮೂಡಿತು.

ಅಂತಹ ಪ್ರಯೋಜನಗಳನ್ನು ನಾವೇ ಅನುಭವಿಸಬಹುದು. ನಂತರ ಸಂಸ್ಥೆಗಳ ಮಟ್ಟದಲ್ಲಿ, ಶಾಲೆಯ ಅಧಿಕಾರಿಗಳು ಶಾಲೆಯ ಕಾರ್ಯಕ್ಷಮತೆ ಸುಧಾರಿಸಿದೆ ಎಂದು ನಮಗೆ ಹೇಳುತ್ತಾರೆ. ಉತ್ತೀರ್ಣರಾಗುವವರ ಪ್ರಮಾಣವು ಸುಧಾರಿಸಿದೆ ಅಥವಾ ವಿದ್ಯಾರ್ಥಿಗಳು ಗಳಿಸಿದ ಸರಾಸರಿ ಅಂಕದ ಪ್ರಮಾಣವು ಸುಧಾರಿಸಿದೆ ಎಂದು ಅವರು ಹೇಳುತ್ತಾರೆ. ಲೈಟ್ ಚಾನೆಲಿಂಗ್ ಅಭ್ಯಾಸದ ಈ ಪರಿಣಾಮಗಳನ್ನು ಅಳೆಯಲು ಸಾಧ್ಯವಿದೆ.

ಇದು ವೈಯಕ್ತಿಕ ಮಟ್ಟದಲ್ಲಿ ನಮಗೆ ಸಹಾಯ ಮಾಡುತ್ತಿರುವಾಗ ಮತ್ತು ಅದು ಸಂಸ್ಥೆಗಳಿಗೆ ಸಹಾಯ ಮಾಡುತ್ತಿದ್ದರೆ, ಅದು ಜಗತ್ತಿಗೆ ಸಹಾಯ ಮಾಡುತ್ತಿರಲೇಬೇಕು. ನಮ್ಮ ಸುತ್ತಲಿನ ಜೀವನವನ್ನು ಗಮನಿಸುವುದರ ಮೂಲಕ ನಾವು ವಾಸ್ತವಸ್ಥಿತಿಯನ್ನು ಊಹಿಸಬಹುದು.

ಸಾಮೂಹಿಕ ಮಾನವ ಪ್ರಜ್ಞೆಯ ಆಧ್ಯಾತ್ಮಿಕ ಮಟ್ಟವನ್ನು ನಾವು ಹೇಗೆ ಅಳೆಯುತ್ತೇವೆ? ಇದನ್ನು ಅಳೆಯುವುದು ಬಹಳ ಕಷ್ಟ. ನಮ್ಮ ಸುತ್ತಲಿನ ಜೀವನವನ್ನು ನೋಡುವ ಮೂಲಕ ಮಾತ್ರ ನಾವು ಊಹಿಸಬಹುದು. ನಮ್ಮ ಸುತ್ತಲಿನ ಜೀವನವನ್ನು ನೋಡಿದಾಗ, ನಾವು ಒಳ್ಳೆಯದು ಮತ್ತು ಕೆಟ್ಟದ್ದು ಎರಡನ್ನೂ ಗಮನಿಸುತ್ತೇವೆ. ಆದರೆ ಕೆಟ್ಟದ್ದನ್ನು ಸ್ವಾಭಾವಿಕವಾಗಿ ಹೆಚ್ಚು ಎತ್ತಿತೋರಿಸಲಾಗುತ್ತದೆ. ಇದು ಸದಾ ಸುದ್ದಿಯಲ್ಲಿರುತ್ತದೆ. ಕೇವಲ ಕೆಟ್ಟದ್ದೇ ನಡೆಯುತ್ತಿದೆ ಎಂದು ನಾವು ಭಾವಿಸುತ್ತೇವೆ. ಆದರೆ, ನಾವು ಆತ್ಮಾವಲೋಕನ ಮಾಡಿಕೊಂಡರೆ, ಅದು ಸತ್ಯವಲ್ಲ ಎಂದು ನಮಗೆ ತಿಳಿಯುತ್ತದೆ. ಅನೇಕ ಒಳ್ಳೆಯ ಸಂಗತಿಗಳು ನಡೆಯುತ್ತಿವೆ, ಸಹಜವಾಗಿ ಅವುಗಳನ್ನು ಎತ್ತಿತೋರಿಸುವುದಿಲ್ಲ. ಒಳ್ಳೆಯ ಸಂಗತಿಗಳನ್ನು ಲಘುವಾಗಿ ಪರಿಗಣಿಸಲಾಗುತ್ತದೆ.

ನಮ್ಮ ಕೊಡುಗೆ ಬಹಳ ಮುಖ್ಯ. ಆದ್ದರಿಂದ, ನಾವು ಈ ಸುಂದರವಾದ ಬೆಳಕನ್ನು ಸ್ವೀಕರಿಸುವುದನ್ನು ಮತ್ತು ಹರಡುವುದನ್ನು ಮುಂದುವರಿಸೋಣ. ■

### ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಅಥವಾ ಆನ್‌ಲೈನ್ ತರಗತಿಗಳ ಪ್ರಾರಂಭದಲ್ಲಿ ಅಥವಾ ಇನ್ನಾವುದೇ ಸಮಯದಲ್ಲಿ ಬೆಳಕನ್ನು ಪ್ರತಿನಿತ್ಯ 3 ರಿಂದ 7 ನಿಮಿಷಗಳ ಕಾಲ ಚಾನಲ್ ಮಾಡಿಸುವುದರ ಮೂಲಕ ಲೈಟ್‌ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

### ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 6175 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 30.98 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | : | 508 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | : | 2.21 ಲಕ್ಷ |



ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.





# ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ**

ಸೊಲಾಪುರದ ಕೊರವಲಿ ಗ್ರಾಮದಲ್ಲಿರುವ ಶ್ರೀ ಅಮೋಘಸಿದ್ಧ ಪ್ರಶಾಲ ಮತ್ತು ಜೂನಿಯರ್ ಕಾಲೇಜಿನಲ್ಲಿ ನಾನು ಪ್ರಾಧ್ಯಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ಕಳೆದ ಒಂದು ವರ್ಷದಿಂದ ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುತ್ತಿದ್ದೇನೆ. ಸುಮಾರು 22 ವರ್ಷಗಳ ನನ್ನ ಸೇವೆಯಲ್ಲಿ, ನಾನು ಹೆಚ್ಚು ಅಸಂತೋಷವಾಗಿದ್ದೆ ಮತ್ತು ಒತ್ತಡ ಕ್ಕೊಳಗಾಗಿದ್ದೆ. ಈ ಪರಿಸ್ಥಿತಿಯಿಂದ ಹೊರಗೆ ಬರಲು ನನಗೆ ದಾರಿ ಕಾಣುತ್ತಿರಲಿಲ್ಲ. ಹೋದ ವರ್ಷ ಸಭ್ಯ ವ್ಯಕ್ತಿಯೊಬ್ಬರು ನಮ್ಮ ಶಾಲೆಗೆ ಬಂದು ಲೈಟ್ ಚಾನೆಲ್ ಮಾಡುವುದರ ಬಗ್ಗೆ ನಮಗೆ ಸರಿಯಾದ ಎಲ್ಲ ಮಾಹಿತಿಗಳನ್ನು ಕೊಟ್ಟರು, ಅದರ ಪ್ರಯೋಜನಗಳನ್ನು ತಿಳಿಸಿದರು ಮತ್ತು 7 ನಿಮಿಷಗಳ ಕಾಲ ಲೈಟ್ ಚಾನೆಲ್ ಮಾಡಿಸಿದರು. ಇಂದಿನವರಗೆ ನಾವು ಅದನ್ನು ನಿಯತವಾಗಿ ಅಭ್ಯಾಸ ಮಾಡುತ್ತಿದ್ದೇವೆ. ಇದರ ಅಭ್ಯಾಸ ಪ್ರಾರಂಭಿಸಿದಾಗಿನಿಂದ ಇಂದಿನವರಗೆ ನಾನು ಒತ್ತಡಗಳಿಂದ ಮುಕ್ತನಾಗಿದ್ದೇನೆ ಮತ್ತು ನನ್ನ ಮನಸ್ಸು ಯಾವಾಗಲೂ ಸಂತೋಷ ವಾಗಿರುತ್ತದೆ ಮತ್ತು ಉಲ್ಲಾಸವಾಗಿರುತ್ತದೆ ಎಂದು ಹೇಳಲು ಸಂತೋಷ ವಾಗುತ್ತದೆ. ನನಗೆ ಯಾವುದೇ ಉದ್ವೇಗವಿಲ್ಲ ಮತ್ತು ಅದು ನನ್ನ ಜೀವನದ ಮೇಲೆ ಬೇರೆ ರೀತಿಯ ಪ್ರಭಾವ ಬೀರಿದೆ. ನಾನು ವಿಜ್ಞಾನದ ವಿಷಯವನ್ನು ಕಲಿಸುತ್ತೇನೆ ಮತ್ತು ಹೋದ ವರ್ಷ ನನ್ನ ಎಲ್ಲಾ ವಿದ್ಯಾರ್ಥಿಗಳು A+ ಅಂಕ ಗಳಿಸಿದರು. ಮುಂಚೆ ನಾನು ತುಂಬಾ ಭಯ ಪಡುತ್ತಿದ್ದೆ, ಯಾವಾಗಲೂ ಉದ್ವೇಗಕ್ಕೆ ಒಳ ಗಾಗಿರುತ್ತಿದ್ದೆ ಮತ್ತು ಖಿನ್ನನಾಗಿರುತ್ತಿದ್ದೆ. ನನಗೆ ಸಂತೋಷವಾಗಿ ಬದುಕಲು ದಾರಿ ಕಾಣಿಸುತ್ತಿರಲಿಲ್ಲ. ಲೈಟ್ ಚಾನೆಲಿಂಗ್ ನನ್ನಲ್ಲಿ ಭಾರಿ ಬದಲಾವಣೆಯನ್ನು ತಂದಿದೆ. ಶ್ರೀ ನಿಖಿಲ್ ಗಾಂಧಿಯವರಿಗೆ ಮತ್ತು ಅವರು ಕೆಲಸ ಮಾಡುತ್ತಿರುವ ಸಂಸ್ಥೆಗೆ ಮತ್ತು ಅಲ್ಲಿರುವ ಸಂಪೂರ್ಣ ಸಿಬ್ಬಂದಿಗಳಿಗೆ ನಾನು ತುಂಬಾ ಕೃತಜ್ಞತ ನಾಗಿದ್ದೇನೆ. ಜನರಿಗೆ ಜ್ಞಾನೋದಯವನ್ನು ಕೊಡುವ ನಿಮ್ಮ ಕೆಲಸ, ಜನರಿಂದ ಭಯವನ್ನು ತೆಗೆದುಹಾಕುವ ಮತ್ತು ಅವರನ್ನು ಸಂತೋಷವಾಗಿರಿಸುವ ನಿಮ್ಮ ಕೆಲಸ ನಿಮ್ಮ ಮೂಲಕ ಮುಂದುವರೆಯಲಿ ಎಂದು ನಾನು ದೇವರನ್ನು ಪ್ರಾರ್ಥನೆ ಮಾಡುತ್ತೇನೆ.

– ಚಂದ್ರಕಾಂತ್ ಧೊತ್ರೆ, ಲೈಟ್ ಚಾನೆಲ್

ಬೆಂಗಳೂರಿನ ಪ್ರೀತಿ ಇಂಗ್ಲೀಷ್ ಸ್ಕೂಲ್‌ನಲ್ಲಿರುವ 7ನೇ ತರಗತಿಯ ವಿದ್ಯಾರ್ಥಿ ರಚನ ತನ್ನ ಅನುಭವವನ್ನು ಹಂಚಿಕೊಂಡಳು. ಅವಳು ಪ್ರತಿ ದಿನ ಲೈಟ್ ಚಾನೆಲ್ ಮಾಡುತ್ತಾಳೆಂದು ಹೇಳಿದಳು. ಅದು ಅವಳನ್ನು ಪ್ರಶಾಂತವಾಗಿರುವಂತೆ ಮಾಡುತ್ತದೆ. ಅವಳಲ್ಲಿ ಯಾವುದೇ ನಕಾರಾತ್ಮಕ ಯೋಚನೆಗಳು ಇದ್ದಾಗ, ಅವಳು ಲೈಟ್ ಚಾನೆಲ್ ಮಾಡುತ್ತಾಳೆ. ಅದು ಸಕಾರಾತ್ಮಕ ಚೈತನ್ಯಗಳನ್ನು ತರುತ್ತದೆ. ಮುಖ್ಯೋಪಾಧ್ಯಾಯಿನಿ ಶ್ರೀಮತಿ. ಜಯಶ್ರೀ ಪ್ರತಿ ದಿನ ನಿರ್ಧಾರ ತೆಗೆದುಕೊಳ್ಳಬೇಕಾಗಿರುವಾಗ ಅವರು ಲೈಟ್ ಚಾನೆಲ್ ಮಾಡುತ್ತಾರೆಂದು ಹೇಳಿದರು.

– ಸುಧಾ ಸುರೇಶ್ ಬಾಬು, ಕಾರ್ಯಕರ್ತೆ

ಬೆಂಗಳೂರಿನ ಟಿ. ದಾಸರಹಳ್ಳಿಯಲ್ಲಿರುವ ಗೀತ ಸ್ಕೂಲಿನ ಶಿಕ್ಷಕಿಯಾದ ಶ್ರೀಮತಿ ಜಗದಂಬರವರು ಹೀಗೆ ಹಂಚಿಕೊಂಡರು. ಅವರು ಮತ್ತು ಶ್ಯೋನ್‌ಶಾಟ್ ಶಾಲೆಯಲ್ಲಿ ಓದುತ್ತಿರುವ ಅವರ ಮಗಳು ಇಬ್ಬರೂ ನಿಯತವಾಗಿ ಲೈಟ್ ಚಾನೆಲ್ ಮಾಡುತ್ತಾರೆ. ಆಕೆಯ ತಂಗಿ ಕಣ್ಣಿನ ಆಪರೇಶನ್‌ಗಾಗಿ ಅವರ ಮನೆಗೆ ಭೇಟಿ ನೀಡಿದಾಗ ಅವರ ರಕ್ತದ ಸಕ್ಕರೆಯ ಮಟ್ಟವು ಜಾಸ್ತಿ ಇತ್ತು. ಆಕೆ ಮತ್ತು ಮಗಳು ಇಬ್ಬರೂ ಅವರಿಗೆ ಬೆಳಕನ್ನು ಕಳುಹಿಸಿದರು. ಒಂದು ವಾರದೊಳಗೆ ಪ್ರತಿಯೊಂದೂ ಸಹಜ ಸ್ಥಿತಿಗೆ ಬಂತು ಮತ್ತು ಆಕೆಯ ಕಣ್ಣಿನ ಆಪರೇಶನ್ ಚೆನ್ನಾಗಿ ನೆಡೆಯಿತು. ಮುಂದುವರಿಸುತ್ತಾ, ಆ ಶಿಕ್ಷಕಿಯು ತಮ್ಮ ಶಾಲೆಯಲ್ಲಿ ಪ್ರತಿ ಶನಿವಾರದಂದು ಹಾಗೂ ಅಂತರರಾಷ್ಟ್ರೀಯ ಯೋಗ ದಿನಗಳಂತಹ ವಿಷೇಶ ಸಂದರ್ಭಗಳಂದು ಲೈಟ್ ಚಾನೆಲ್ ಮಾಡುತ್ತೇವೆಂದು ಹೇಳಿದರು.

– ಚಂದ್ರಕಲಾ ಡಿ, ಕಾರ್ಯಕರ್ತೆ

ಬೆಂಗಳೂರಿನ ಕೂಕ್ ಟೌನ್‌ನಲ್ಲಿರುವ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ನಡೆಯುವ ಲೈಟ್ ಚಾನಲಿಂಗ್ ಸೆಷನ್‌ಗಳಿಗೆ ನಾನು ನಿಯತವಾಗಿ ಹಾಜರಾಗುತ್ತೇನೆ. ಹೋದ ವಾರ, ಮಾನಸ ಫೌಂಡೇಶನ್‌ನವರು ನಡೆಸುವ ಮೂರನೇ ಭಾನುವಾರದ ಲೈವ್ ಸೆಷನ್‌ಗೆ ಕೂಡ ಸೇರಿದ್ದೆ. ಅದು ತುಂಬಾ ಒಳ್ಳೆಯ ಅನುಭವವಾಗಿತ್ತು. ವಿಶ್ರಾಂತಿಯ ಅನುಭವ ಪಡೆದೆ. ನನ್ನ ಇಡೀ ಮನೆ ಬೆಳಕಿನಿಂದ ತುಂಬಿತ್ತು. 30 ನಿಮಿಷಗಳು ಹೇಗೆ ಕಳೆಯಿತೆಂದು ನನಗೆ ತಿಳಿಯಲಿಲ್ಲ.

– ವಿಜಯಲಕ್ಷ್ಮಿ, ಲೈಟ್ ಚಾನೆಲ್

ಸ್ನೇಹಿತೆಯೊಬ್ಬರ ಮಗಳು, ಮೆಡಿಕಲ್ ವಿದ್ಯಾರ್ಥಿ ಯಾಗಿರುವ ದೀಕ್ಷ ಮೂರನೇ ಭಾನುವಾರದ ಲೈಟ್ ಚಾನೆಲಿಂಗ್ ಸೆಷನ್‌ನ ನೇರ ಪ್ರಸಾರದಲ್ಲಿ ಭಾಗವಹಿಸಲು ಲಿಂಕ್ ಕಳುಹಿಸಲು ನನ್ನನ್ನು ಕೇಳಿದಳು. ಅದಕ್ಕೆ ಹಾಜರಾದ ಮೇಲೆ ಅದು ತುಂಬಾ ಚೆನ್ನಾಗಿತ್ತೆಂದು ಮತ್ತು ಸೆಷನ್ ಮುಗಿದ ನಂತರ ಅವಳಿಗೆ ಅದರಿಂದ ಆಚೆ ಬರಲು ಇನ್ನೂ 5 ನಿಮಿಷಗಳು ಬೇಕಾಯಿತೆಂದು ಅವಳು ಹೇಳಿದಳು.

– ನಿರ್ಮಲ ಬಾಲ, ಕಾರ್ಯಕರ್ತೆ

ನಮ್ಮ ಶಾಲೆಯ ಬೆಳಗಿನ ಅಸೆಂಬ್ಲಿಯಲ್ಲಿ ನಡೆಯುವ ಲೈಟ್ ಚಾನೆಲಿಂಗ್ ಮಕ್ಕಳಿಂದ ಹೆಚ್ಚು ಸಕಾರಾತ್ಮಕವಾದ ಪ್ರತಿಕ್ರಿಯೆಗಳನ್ನು ಸೆಳೆಯುತ್ತದೆ. ದಿನದಿಂದ ದಿನಕ್ಕೆ ವಿದ್ಯಾರ್ಥಿಗಳು ಹೆಚ್ಚು ಪ್ರಯೋಜನಗಳನ್ನು ಪಡೆದು ಕೊಳ್ಳುತ್ತಿದ್ದಾರೆ. ಚಾನೆಲ್ ಮಾಡಿದ ನಂತರ ಮಕ್ಕಳ ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ ಮತ್ತು ಅವರಲ್ಲಿ ಸಕಾರಾತ್ಮಕತೆಯನ್ನು ನಾವು ಗಮನಿಸಬಹುದು. ಈ ಸಮಯದಲ್ಲಿ ಅಸೆಂಬ್ಲಿ ಹಾಲ್‌ನಲ್ಲಿ ಮಾಡುವ ಮೌನದ ಅಭ್ಯಾಸವು ನಮ್ಮನ್ನು ಮುಗ್ಧಗೊಳಿಸುತ್ತದೆ.

– ಮುಖ್ಯೋಪಾಧ್ಯಾಯಿನಿ, ನ್ಯು ಡಾನ್ ಬಾಸ್ಕೊ ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್, ಅಪ್ಪಗೆರೆ, ಚೆನ್ನಪಟ್ಟಣ

ಬೆಳಕಿನ ಸಂಚಲನ, ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಜೋಸ್ಕೊ ಪ್ರಿಂಟರ್ಸ್, ರಾಮಮೂರ್ತಿನಗರ, ಬೆಂಗಳೂರು – 560 016.
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ